


**ISSN: 2454–5813**
IJKR 2018; 4(1): 05-08
© 2018 IJKR
www.kannadajournal.com
Received: 02-11-2017
Accepted: 03-12-2017

**Ramesha C**
Langauges Department of Kannada, IFIM College, Electronics city Phase-1, Bengaluru, Karnataka, India

**Correspondence**
**Ramesha C**
Langauges Department of Kannada, IFIM College, Electronics city Phase-1, Bengaluru, Karnataka, India

# ಜಾತಿಯ ವಿನಾಶಕ

## Ramesha C

ಭಾರತೀಯ ಹೆಮ್ಮೆಯ ಪುತ್ರ, ಮಹಾನ್ ಮಾನವತಾವಾದಿ, ಶ್ರೇಷ್ಠ ರಾಜಕೀಯ ಚಿಂತಕ, ರೈತ ಪ್ರೇಮಿ, ಮಹಿಳಾ ವಿಮೋಚಕ, ಸಂವಿಧಾನ ಶಿಲ್ಪಿ, ಅತ್ಯುತ್ತಮ ಬರಹಗಾರ, ಮಹಾನ್ ದಾರ್ಶನಿಕ, ಜಾತಿಯ ವಿನಾಶಕ, ಸಾಮಾಜಿಕ ಕ್ರಾಂತಿಯ ಹರಿಕಾರ, ಭಾರತದ ಜಾತಿ ವ್ಯವಸ್ಥೆಯ ಕಠೋರ ಸತ್ಯಗಳನ್ನು ಅತ್ಯಂತ ನಿಷ್ಠೂರವಾಗಿ ಜಗತ್ತಿನ ಮುಂದೆ ಬಿಡಿಸಿಟ್ಟ ಚಿಂತಕ ಡಾ. ಬಿ. ಆರ್. ಅಂಬೇಡ್ಕರ್ ಅವರು ಹೇಳುವಂತೆ "ಜಾತಿಯಿಂದ ಹಿಂದೂಗಳ ನೀತಿ ಶೋಚನೀಯ ಅವಸ್ಥೆಗೆ ಮುಟ್ಟಿದೆ. ಜಾತಿ ಸಾರ್ವಜನಿಕ ಭಾವನೆಯನ್ನು ನಾಶಗೊಳಿಸಿದೆ; ಹೃದಯ ವೈಶಾಲ್ಯ ಹಾಳು ಮಾಡಿದೆ. ಸಾರ್ವಜನಿಕ ಅಭಿಪ್ರಾಯಗಳಿಗೆ ಅವಕಾಶವಿಲ್ಲದಂತೆ ಮಾಡಿದೆ. ಹಿಂದೂವಿನ ಸಮಾಜ ಹಾಗೂ ಹೊಣೆಗಾರಿಕೆ ಅವರ ಜಾತಿಗೆ ಸೀಮಿತ. ಅವನ ನಿಷ್ಠೆ ಜಾತಿಗೆ ಪರಿಮಿತವಾಗಿದೆ. ಸದ್ಗುಣ ಹಾಗೂ ನೀತಿ ಎರಡೂ ಜಾತೀಯತೆಯ ಮುಷ್ಟಿಯಲ್ಲಿ ಸಿಕ್ಕಿಕೊಂಡಿದೆ. ಸಹಾನುಭೂತಿ ಯಾರಿಗೆ ಅವಶ್ಯಕವೊ ಅದು ಅವನಿಗೆ ಸಿಕ್ಕುತ್ತಿಲ್ಲ. ಸಹಾನುಭೂತಿ ತಮ್ಮ ಜಾತಿಯವರಿಗೆ ಮಾತ್ರ ಉಂಟು. ಇತರರಿಗೆ ಇಲ್ಲ. ಮುಂದಾಳೆಂದು ಒಪ್ಪಿಕೊಳ್ಳ ಬೇಕಾದರೆ ಅವನು ತಮ್ಮ ಜಾತಿಯವನೇ ಆಗಿರತಕ್ಕದ್ದು. ಮುಂದಾಳು ಬ್ರಾಹ್ಮಣನಾಗಿದ್ದರೆ ಮಾತ್ರ ಕ್ಷತ್ರಿಯರು ಅವನ ಅನುಯಾಯಿಯಾಗುತ್ತಾರೆ. ಕ್ಷತ್ರಿಯನು ಮುಂದಾಳಾದರೆ ಮಾತ್ರ ಕ್ಷತ್ರಿಯರು ಅವನ ಅನುಯಾಯಿಯಾಗುತ್ತಾರೆ. ಇತರ ಜಾತಿಗಳಿಗೂ ಈ ಮಾತು ಹೀಗೆಯೇ ಅನ್ವಯಿಸುತ್ತದೆ. ಒಬ್ಬ ಮನುಷ್ಯನ ಜಾತಿ ಯಾವುದೆ ಇರಲಿ, ಅವನ ಯೋಗ್ಯತೆಯನ್ನು ಮನ್ನಿಸಬೇಕೆಂಬ ಬುದ್ಧಿ ಅಥವಾ ಹಾಗೆ ಮಾಡುವ ಧೈರ್ಯ ಹಿಂದುವಿಗೆ ಇಲ್ಲ ತಮ್ಮ ಜಾತಿಯವನಾದರೆ ಮಾತ್ರ ಅವನನ್ನು ಮನ್ನಿಸುತ್ತಾರೆ. ಅನಾಗರಿಕ ಜನರ ಗುಂಪಿನ ನೀತಿ ಎಷ್ಟು ಸಂಕುಚಿತವೋ ಅಷ್ಟು ಸಂಕುಚಿತವಾಗಿದೆ ಜಾತಿಯ ನೀತಿ. ಹೀಗೆ ತಂತಮ್ಮ ಜಾತಿಯ ಹಿತವನ್ನೇ ನೋಡಿಕೊಳ್ಳುತ್ತ ಹಿಂದೂಗಳು ದೇಶಕ್ಕೆ ದ್ರೋಹ ಬಗೆದಿಲ್ಲವೆ?

ಜಾತಿಯ ವಿನಾಶದ ಹೊರತು ಸಮಾನತೆಯ ಹಿಂದೂ ಸಮಾಜದ ಸ್ಥಾಪನೆ ಅಸಾಧ್ಯ ಹಾಗೆಯೇ, ಸಾಮಾಜಿಕ ಕ್ರಾಂತಿಯ ಹೊರತಾಗಿ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದು ಬಲವಾಗಿ ನಂಬಿದ್ದ ಅಂಬೇಡ್ಕರ್ ರವರು ಭಾರತಕ್ಕೆ ಮೊದಲು ಸಾಮಾಜಿಕ ಸ್ವಾತಂತ್ರ್ಯ ದೊರೆಯ ಬೇಕೆಂದು ಪ್ರತಿಪಾದಿಸಿದವರು. ಜಾತಿಪದ್ಧತಿ, ಬಡತನ, ಅಸ್ಪೃಶ್ಯತೆ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಆಳವಾಗಿ ಅಧ್ಯಯನ ಮಾಡಿ ಈ ಸಮಸ್ಯೆಗಳಿಗೆ ತಮ್ಮದೇ ಆದ ಸಿದ್ಧಾಂತಗಳನ್ನು ನೀಡಿದರು.

ಶ್ರಮ ವಿಭಾಗವು ಪ್ರತಿಯೊಂದು ಸುಧಾರಿತ ಸಮಾಜದ ಅವಶ್ಯ ಲಕ್ಷಣವಾಗಿರುವಾಗ ಜಾತಿಪದ್ಧತಿಯಿದ್ದರೇನೂ ದೋಷವಿರುವುದಿಲ್ಲವೆಂದೂ ಕೆಲವರು ವಾದಿಸುತ್ತಾರೆ. ಆದರೆ ಶ್ರಮ ವಿಭಾಗವಾಗಿರದೆ, ಶ್ರಮಜೀವಿಗಳ ವಿಭಾಗವೂ ಆಗಿದೆ. ಸುಧಾರಿತ ಸಮಾಜಕ್ಕೆ ಶ್ರಮ ವಿಭಾಗ ಅವಶ್ಯವೆಂಬುದು ನಿರ್ವಿವಾದ. ಆದರೆ ಶ್ರಮ ವಿಭಾಗದಿಂದ ಶ್ರಮಿಕ ವರ್ಗಗಳೂ ಒಂದಕ್ಕೊಂದು ಸೇರಿದಂತೆ ಪ್ರತ್ಯೇಕವಾಗಿ ವಿಭಾಗವಾಗುವುದು ಯಾವ ಸುಧಾರಿತ ಸಮಾಜದಲ್ಲಿಯೂ ಕಾಣದು. ಜಾತಿ ಪದ್ಧತಿ ಶ್ರಮಿಕರ ವಿಭಾಗ ಮಾತ್ರವಲ್ಲ, ಅದರಲ್ಲಿ ವಿಭಾಗಗೊಂಡ ವರ್ಗಗಳು ಮೇಲುವರ್ಗ, ಕೆಳವರ್ಗ ಅದಕ್ಕೂ ಕೆಳವರ್ಗ ಹೀಗೆ ಒಂದು ನೀಚೋಚ್ಚ ಶ್ರೇಣಿಯನ್ನು ಹೊಂದಿದೆ. ಈ ಶ್ರಮ ವಿಭಾಗ ಸಹಜವಾದುದಲ್ಲ, ವ್ಯಕ್ತಿಗಳ ಸಾಮರ್ಥ್ಯ ಅಥವಾ ಯೋಗ್ಯತೆಯನ್ನು ಅದು ಆಧರಿಸಿಲ್ಲ.

ಅಂಬೇಡ್ಕರ್ ರವರ ಕ್ರಾಂತಿಕಾರಕ ಚಿಂತನೆಗಳು ಪ್ರಸುತ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಉತ್ತರವನ್ನು ಹುಡುಕುವಲ್ಲಿ ಸಹಕಾರಿಯಾಗಿವೆ. ಸಹಸ್ರಾರು ವರುಷಗಳಿಂದ ದಲಿತರ ಮೇಲಾಗುತ್ತಿರುವ ಹಿಂಸೆ, ದೌರ್ಜನ್ಯ, ಶೋಷಣೆಯನ್ನು ಕಿತ್ತೊಗೆದು ಒಂದು ಅರ್ಥಪೂರ್ಣ ಮಾನವೀಯ ಮೌಲ್ಯಗಳುಳ್ಳ ಸಮಾಜ ನಿರ್ಮಾಣದ ಕನಸು ಕಂಡಿದ್ದರು.

ಅಂಬೇಡ್ಕರಲ್ಲಿದ್ದ ರಾಷ್ಟ್ರಭಕ್ತಿ, ಈ ನೆಲದಲ್ಲಿ ರಕ್ತ ರಹಿತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ನಿರ್ಮಾಣಕ್ಕಾಗಿ ಅವರು ಮಾಡಿದ ಹೋರಾಟ ಮತ್ತು ಪ್ರಖರ ಚಿಂತನೆಗಳು, ಈ ದೇಶದ ಸಮಗ್ರ ಅಭಿವೃದ್ಧಿಗಾಗಿ ಅವರಲ್ಲಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯದ ಸೃಷ್ಟಿ ನಿಲುವುಗಳು, ಮಹಿಳೆಯರ ವಿಮೋಚನೆಗೆ ಅವರು ಮಾಡಿದ ಹೋರಾಟ, ಈ ದೇಶದ ಬಹುಜನರ ಬಿಡುಗಡೆಗೆ ಅವರು ತೋರಿದ ಮಾರ್ಗ ಇವುಗಳೆಲ್ಲವೂ ತಿಳಿದು ಕೊಳ್ಳುವುದು ಇಂದು ತುಂಬಾ ಅಗತ್ಯವಾಗಿದೆ.

ಡಾ. ಬಾಬಾ ಸಾಹೇಬ್ ಬಿ. ಆರ್.ಅಂಬೇಡ್ಕರ್‌ರವರು ಈ ದೈವೀಕರಣ ಮತ್ತು ಪವಾಡೀಕರಣವನ್ನು ಖಂಡ ತುಂಡವಾಗಿ ವಿರೋಧಿಸುತ್ತಿದ್ದರು. "ಧಾರ್ಮಿಕವಾಗಿ ಭಕ್ತಿಯೆಂಬುದು ಮೋಕ್ಷ ಸಾಧನೆಯ ಮಾರ್ಗವಾಗಿರಬಹುದು, ಆದರೆ ರಾಜಕೀಯದಲ್ಲಿ ಭಕ್ತಿ ಅಥವಾ ವ್ಯಕ್ತಿಪೂಜೆ ಎಂಬುದು ಅವನತಿ ಮತ್ತು ಆ ಮೂಲಕ ಸರ್ವಾಧಿಕಾರಕ್ಕೆ ಕೊಂ ಡೊಯ್ಯುವ ಖಚಿತ ಮಾರ್ಗವಾಗಿದೆ." ಎಂಬುದು ಅಂಬೇಡ್ಕರ್ ರವರ ಸ್ಪಷ್ಟ ಗ್ರಹಿಕೆಯಾಗಿತ್ತು. ಸ್ವತಂತ್ರ ಮತ್ತು ವೈಜ್ಞಾನಿಕ ವಿಶ್ಲೇಷಣೆಗಳು ಬಿಡುಗಡೆಯ ಮಾರ್ಗವೇ ವಿನಃ ಸಂಪ್ರದಾಯಕ್ಕೆ ಕಟ್ಟು ಬೀಳುವ ಅಥವಾ ಹೊಸತಿಗೆ ತೆರೆದು ಕೊಳ್ಳದ ಸಮಾಜ ಕೊಳೆಯುತ್ತದೆ ಮತ್ತು ಅಂಥ ದೇಶ ದುರ್ಬಲವಾಗುತ್ತದೆ. ಎಂದು ಅವರು ಪ್ರಬಲವಾಗಿ ಪ್ರತಿಪಾದಿಸುತಿದ್ದರು. ಅಂಬೇಡ್ಕರ್ ರವರ ಪ್ರಕಾರ ಭಾರತೀಯ ಸಮಾಜದ ಬಹು ದೊಡ್ಡ ದೌರ್ಬಲ್ಯ ವೈಜ್ಞಾನಿಕ ಪ್ರಮಾಣಗಳಿಗಿಂತ ವೇದ ಶಾಸ್ತ್ರಗಳ ಪ್ರಮಾಣಗಳಿಗೆ ಜೋತು ಬಿದ್ದಿರುವುದೇ ಆಗಿದೆ.

ಆಗ ಬ್ರಿಟಿಷರನ್ನು ಭಾರತ ಬಿಟ್ಟು ಓಡಿಸುವುದು ಅರ್ಥಾತ್ ಬಾಹ್ಯ ಸಾಮ್ರಾಜ್ಯಶಾಹಿಯಿಂದ ವಿಮುಕ್ತವಾಗುವುದೇ ಸ್ವಾತಂತ್ರ್ಯದ ಪರಮಾರ್ಥ ಎಂಬ ಪರಿಕಲ್ಪನೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಧಾನವಾಗಿ ಚಾಲ್ತಿಯಲ್ಲಿತ್ತು. ಆ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಭಾರತೀಯ ಸಮಾಜದೊಳಗಿನ ಜಾತಿ ವ್ಯವಸ್ಥೆಯೆಂಬ ಆಂತರಿಕ ವಸಾಹತು ಶಾಹಿಯಿಂದ ಬಿಡುಗಡೆಯ ಮಾರ್ಗವನ್ನು ಕಲ್ಪಿಸಿಕೊಡದೆ, ಕೇವಲ ಪರಕೀಯರನ್ನು ಹೊರಗಟ್ಟುವುದಕ್ಕೆ ಮಾತ್ರ ಸೀಮಿತವಾಗುವ ಸ್ವಾತಂತ್ರ್ಯ ದೇಶದ ಶೋಷಿತ ಧಮನಿತರನ್ನು ಪರಕೀಯ ಬದಲಿಗೆ ಸ್ವಕೀಯ ದೊರೆಗಳ ಊಳಿಗದವರನ್ನಾಗಿ ಮುಂದುವರೆಸುತ್ತದಷ್ಟೇ ಎಂದು ಅಂಬೇಡ್ಕರ್ ಘೋಷಿಸಿದರು. ಆದ್ದರಿಂದ ಕೇವಲ ರಾಜಕೀಯ ಸ್ವಾತಂತ್ರ್ಯ ದೇಶದ ದಮನಿತ, ಶೋಷಿತರಿಗೆ ಅಸಂಗತ ಎಂಬ ಅಹಿತಕರ ಸತ್ಯವನ್ನು ಬಲವಾಗಿ ಪ್ರತಿಪಾದಿಸಿದರು.

ಇಂದು ಸ್ವಾತಂತ್ರ್ಯ ಬಂದು 68 ವರ್ಷಗಳೇ ಕಳೆದಿವೆ. ರಾಜಕೀಯ ಸ್ವಾತಂತ್ರ್ಯ ಖಾತರಿಯಾಗಿರುವ ಭಾರತದಲ್ಲಿ ಸಾಮಾಜಿಕ ಆರ್ಥಿಕ ಸಮಾನತೆ ಇನ್ನಷ್ಟು ದೂರದ ಕನಸಾಗಿ ಬಿಟ್ಟಿದೆ. ಇದನ್ನು ಅರ್ಥ ಮಾಡಿಕೊಳ್ಳಲು ಒಂದಡೆ ನಮ್ಮ ಸುತ್ತ ಮುತ್ತಲ್ಲಿ ಹೆಚ್ಚುತ್ತಿರುವ ಕೊಳಗೇರಿಗಳು, ರೈತರ ಆತ್ಮಹತ್ಯೆಗಳು, ಮತ್ತೊಂದಡೆ ಪ್ರತಿ ವರ್ಷ ಹೆಚ್ಚುತ್ತಿರುವ ಶತ ಕೋಟ್ಯಾಧಿಪತಿಗಳು ಎಂಬ ವೈರುಧ್ಯವೇ ಕಳೆದ ಏಳು ದಶಕಗಳಲ್ಲಿ ಬಡವ–ಶ್ರೀಮಂತರ ನಡುವಿನ ಅಂತರ ಅರ್ಥಾತ್ ಆರ್ಥಿಕ ಅಸಮಾನತೆ ಭೂಮ್ಯಾಕಾಶದಷ್ಟು ಬೆಳೆದಿದೆ. ಎಂಬುದನ್ನು ಸಾರಿ ಹೇಳುತ್ತದೆ. ಜಾತಿ ಶೋಷಣೆಯ ಸ್ವರೂಪ ಬದಲಾಗಿದ್ದರೂ ಜಾತಿ ಅಪಮಾನ, ಅಸ್ಪೃಶ್ಯತೆ ಮತ್ತು ಲಿಂಗ ತಾರತಮ್ಯಗಳು ಹೊಸ ರೂಪದಲ್ಲೂ ಮತ್ತು ಇನ್ನಷ್ಟು ಕ್ರೂರವಾಗಿಯೂ ಮುಂದುವರಿದಿದೆ. ದಿನದ ಲೆಕ್ಕದಲ್ಲದೆ ಗಂಟೆಗಳ ಲೆಕ್ಕದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ಅತ್ಯಾಚಾರ, ದೌರ್ಜನ್ಯ ಬಹಿಷ್ಕಾರಗಳ ಅಂಕಿ ಅಂಶಗಳೇ ಈ ವಿದ್ಯಮಾನಕ್ಕೆ ಕನ್ನಡಿ ಹಿಡಿಯುತ್ತವೆ. ಅರ್ಥಾತ್ ಸಾಮಾಜಿಕ ಅಸಮಾನತೆ ಮತ್ತು ಸಾಮಾಜಿಕ ಅಂತರ ಇಂತಿಷ್ಟೂ ಕಡಿಮೆಯಾಗಿಲ್ಲ ಇವೆಲ್ಲವನ್ನೂ ಕಡಿಮೆ ಮಾಡುವ ಭರವಸೆ ನೀಡುವ ಸಂವಿಧಾನ ಇದ್ದರೂ ಮತ್ತು ಅದು ಖಾತರಿ ಮಾಡುವ ರಾಜಕೀಯ ಸ್ವಾತಂತ್ರ್ಯ ಮೂಲಭೂತ ಹಕ್ಕಗಿದ್ದರೂ ಅವು ಆರ್ಥಿಕತೆಯನ್ನಾಗಲಿ, ಸಾಮಾಜಿಕ ರಚನೆಗಳನ್ನಾಗಲೀ, ಪ್ರಜಾ ತಾಂತ್ರಿಕ ಗೊಳಿಸಲು ಸಫಲವಾಗಲಿಲ್ಲ ಏಕೆ?

ಸಾಮಾಜಿಕ ಪ್ರಜಾತಂತ್ರ, ಆರ್ಥಿಕ ಪ್ರಜಾತಂತ್ರವಿಲ್ಲದ ರಾಜಕೀಯ ಪ್ರಜಾತಂತ್ರ ಎಲ್ಲಾ ಬಗೆಯ ಅಸಮಾನತೆಯನ್ನು ಮುಂದುವರೆಸುತ್ತದಷ್ಟೆ ಎಂದು ಡಾ. ಬಿ. ಆರ್. ಅಂಬೇಡ್ಕರ್ ಎಚ್ಚರಿಸಿದರು. ಈ ನೆಲದಲ್ಲಿ ನಿಜವಾದ ಸ್ವಾತಂತ್ರ್ಯ, ಸಮನತೆ, ಭ್ರಾತೃತ್ವಗಳು ನೆಲೆಗೊಳ್ಳ ಬೇಕಾದರೆ ಜಾತಿ ವಿನಾಶವಾಗಬೇಕು ಮತ್ತು ಪ್ರಭುತ್ವವೇ ಸಮಾಜವನ್ನು ಜಾರಿ ಮಾಡ ಬೇಕೆ ಹೊರತು ಲಾಭಕ್ಕಾಗಿ ಉಧ್ಯಮವನ್ನು ಮಾಡುವ ಖಾಸಗಿ ಬಂಡವಾಳಶಾಹಿ ಎಂದಿಗೂ ಈ ಆರ್ಥಿಕ ನ್ಯಾಯವನ್ನು ಮಾಡಲಾರದು ಎಂದು ಸ್ಪಷ್ಟವಾದ ಮಾರ್ಗ ದರ್ಶನವನ್ನು ಡಾ. ಬಾಬ ಸಾಹೇಬ್ ಅಂಬೇಡ್ಕರ್ ನೀಡಿದ್ದರು. ಆದರೆ ಇವರು ನೀಡಿದ ಈ ಎಚ್ಚರ ವಿವೇಕ ಮತ್ತು ಜಾಗೃತಿಯನ್ನು ಸಂವಿಧಾನ ರಚಿಸುವಾಗಲೇ ಸಡಿಸಲಾಗಿತ್ತು. ಆದ್ದರಿಂದಲೇ ಅದರ ಫಲವನ್ನು ಈ ದೇಶದ ಶೋಷಿತ ಧಮನಿತ ಜನತೆ ಈಗಲೂ ಅನುಭವಿಸುವಂತಾಗಿದೆ.

ಭಾರತದ ಸ್ವಾತಂತ್ರ್ಯವು ನಮ್ಮ ದೇಶದ ಅಸಮಾನ ಸಾಮಾಜಿಕ ರಚನೆಯ ಅಡಿಪಾಯವಾಗಿರುವ ಜಾತಿಯನ್ನು ವಿನಾಶ ಮಾಡುವುದಿರಲಿ, ಜಾತಿವ್ಯವಸ್ಥೆಯ ಬೇರುಗಳನ್ನು ಅಲ್ಲಾಡಿಸಲಿಲ್ಲ. ಸ್ವಾತಂತ್ರ್ಯ ನಂತರ ಅಳವಡಿಸಿಕೊಂಡ ಆರ್ಥಿಕ ವ್ಯವಸ್ಥೆ ದೇಶದ ಸಂಪತ್ತನ್ನು ಸಮಾನವಾಗಿ ಹಂಚುವ ನೀತಿಗಳನ್ನೂ ಅನುಸರಿಸಲಿಲ್ಲ. ಎಲ್ಲಕಿಂತ ಹೆಚ್ಚಾಗಿ ನಾವೆಲ್ಲ ಒಂದು ದೇಶ ಎಂಬ ಭಾವನೆ ಬರಲು ಬೇಕಾದ ಭ್ರಾತೃತ್ವ ಅರಳಲು ನಮ್ಮ ಸಮಾಜದಲ್ಲಿ ಬೇರು ಬಿಟ್ಟ ಜಾತಿ ವ್ಯವಸ್ಥೆ ಅವಕಾಶವನ್ನೇ ಮಾಡಿ ಕೊಡುತ್ತಿಲ್ಲ. ಹೀಗಾಗಿಯೇ ನಾವು ಒಂದು ಬಲಿಷ್ಠ ಗಣ ರಾಜ್ಯವಾಗಿ ಆಗುತ್ತಿಲ್ಲ ಜಾತಿಯನ್ನು ಮೆಟ್ಟನಿಂತ ಬಲಿಷ್ಠ ನಾಗರಿಕ ಸಮಾಜವು ರೂಪುಗೊಳ್ಳುತಿಲ್ಲ. ಆದ್ದರಿಂದಲೇ ಇಂದು ಸ್ವಾತಂತ್ರ್ಯದ ವ್ಯಾಖ್ಯಾನವನ್ನು ಜನರ ಸ್ವಾತಂತ್ರ್ಯವಾಗಿ, ನಿಜವಾದ ಆರ್ಥಿಕ ಮತ್ತು ಸಮಾನತೆಯಾಗಿ ನಿರ್ವಚಿಸಿದ್ದ ಅಂಬೇಡ್ಕರ್ ರನ್ನು ನೆನೆಸಿಕೊಳ್ಳುವುದು ಮತ್ತು ಚಿಂತನೆಗಳ ಮರು ಓದನ್ನು ಮಾಡುವುದು ಅವಶ್ಯಕವಾಗಿದೆ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಎಲ್ಲಾ ಬರಹಗಳು ಭಾರತೀಯ ಸಮಾಜದಲ್ಲಿ ಬೇರು ಬಿಟ್ಟಿರುವ ಸಾಮಾಜಿಕ ಅಸಮಾನತೆ, ಜಾತಿವ್ಯವಸ್ಥೆ ಮತ್ತು ಆರ್ಥಿಕ ಅಸಮನತೆಗಳನ್ನು ವಿಶ್ಲೇಷಿಸುವುದಕ್ಕೆ ಮತ್ತು ಅದನ್ನು ನಾಶ ಮಾಡಿ ನಿಜವಾದ ಅರ್ಥದಲ್ಲಿ "ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ" ಗಳನ್ನು ಖಾತರಿ ಮಾಡುವ ಮಾರ್ಗಗಳ ಅನ್ವೇಷಣೆಗೂ ಮುಡಿಪಾಗಿವೆ. ಅವೆಲ್ಲವೂ ಅಪಾರ ಓದು, ವಿದ್ವತ್ತು, ವೈಜ್ಞಾನಿಕ ವಿಶ್ಲೇಷಣೆಗಳಿಂದ ಕೂಡಿದ ಅದ್ಭುತ ಕೃತಿಗಳಾಗಿವೆ.

ವರ್ತಮಾನದ ಅಸಮಾನತೆಗಳಿಗೆ ಇರುವ ಐತಿಹಾಸಿಕ ಬೇರುಗಳನ್ನು ಅರ್ಥ ಪಡಿಸಲು ಅವರು ಅಪಾರ ಅಧ್ಯಯನ ಮತ್ತು ವಿದ್ವತ್ತಿನಿಂದ ಭಾರತದ ಇತಿಹಾಸವನ್ನು ತಳಸಮುದಾಯಗಳ ಕಣ್ಣುಗಳ ಮೂಲಕ "ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿ" ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಭಾರತದಲ್ಲಿ ಬದಲಾವಣೆ ಬಯಸುವ ಪಂಡಿತ ಪಾಮರರೆಲ್ಲರೂ ಕೃತಿಯ ಸಾರವನ್ನು ಅರ್ಥ ಮಾಡಿಕೊಳ್ಳಲೇಬೇಕು. ಅವರ 'ಜಾತಿ ವಿನಾಶ' ಮತ್ತು 'ಪ್ರಭುತ್ವ ಮತ್ತು ಅಲ್ಪ ಸಂಖ್ಯಾತರು" ಎಂಬ ಕೃತಿಗಳು ಈ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯ ಬೇರುಗಳನ್ನು ಮತ್ತು ಸಮಗ್ರ ನಿವಾರಣೆಗಾಗಿ ಸಾಧಿಸ ಬೇಕಿರುವ ಪರ್ಯಾಯ ಸಾಮಾಜಿಕ, ಆರ್ಥಿಕ,

ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ಕಟ್ಟಿಕೊಡುತ್ತವೆ. ಹಾಗೆಯೇ 'ಹಿಂದೂ ಕೊಡ್ ಬಿಲ್' ಮೂಲಕ ಅವರು ಮಹಿಳಾ ಸಮಾನತೆಗಾಗಿ ಕೊಟ್ಟ ಸರಿ ಸಮಾನವಾದ ಮಹತ್ವ ಮತ್ತು ಏಕಾಂಗಿ ಹೋರಾಟಗಳನ್ನು ಇಂದು ಭಾರತೀಯರೆಲ್ಲರು ಅದರಲ್ಲೂ ಈಗಿನ ಯುವ ಜನರು ಅರ್ಥ ಮಾಡಿಕೊಳ್ಳ ಬೇಕಿದೆ.

"ಸ್ವಾತಂತ್ರ್ಯ, ಸಮನತೆ, ಭ್ರಾತೃತ್ವ" ಗಳು ಅಂಬೇಡ್ಕರ್ ಅವರ ರಾಜಕೀಯ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಆದರ್ಶಗಳು. ತಾವು ಇದನ್ನು ಫ್ರೆಂಚ್ ಕ್ರಾಂತಿಯಿಂದ ಕಂಡು ತಂದ ಮೌಲ್ಯಗಳಲ್ಲ. ಬದಲಿಗೆ ತನ್ನ ಗುರು ಬುದ್ಧನಿಂದ ಕಲಿತದ್ದು ಎಂದು ಅವರು ಸ್ಪಷ್ಟ ಪಡಿಸುತ್ತಾರೆ. ಅವರ ಪ್ರಕಾರ ಈ ಮೂರು ಮೌಲ್ಯಗಳು ಒಂದನ್ನು ಬಿಟ್ಟರೆ ಇನ್ನೊಂದು ಅರ್ಥ ಕಳೆದುಕೊಳ್ಳುವ ಅವಿನಾಭವ ಸಂಬಧಿಗಳು. ಭಾರತದ ಸಂದರ್ಭದಲ್ಲಿ ಭ್ರಾತೃತ್ವದ ಮೌಲ್ಯದ ಬಗ್ಗೆ ಅಂಬೇಡ್ಕರ್ ಹೆಚ್ಚಿನ ಒತ್ತು ನೀಡುತ್ತಾರೆ. ಏಕೆಂದರೆ ಭಾರತ ಒಂದು ನಿಜವಾದ ಗಣ ರಾಜ್ಯವಾಗ ಬೇಕೆಂದರೆ ಇಲ್ಲಿ ಸಮನ ಹಕ್ಕುಳ್ಳ ನಾಗರಿಕರು ಇರಬೇಕು. ಆದರೆ ಶ್ರೇಣಿ ಕೃತ ಅಸಮಾನತೆಯುಳ್ಳ ಸಮಜವನ್ನು ಹುಟ್ಟು ಹಾಕಿರುವ ಜಾತಿ ವ್ಯವಸ್ಥೆ ಮನುಷ್ಯರೆಲ್ಲರೂ ಸಮಾನರು ಎಂಬ ಪರಿಕಲ್ಪನೆಗೆ ವಿರುದ್ಧವಾಗಿರುವುದರಿಂದ, ಇಲ್ಲಿ 'ಭ್ರಾತೃತ್ವ ಒಂದು ಸಹಜ ಮೌಲ್ಯವಾಗುವುದೇ ಇಲ್ಲ. ಆದ್ದರಿಂದಲೇ ಅಂಬೇಡ್ಕರ್ ರವರು ನಾವು ಮೊದಲು ಭಾರತೀಯ ಸಮಾಜದಲ್ಲಿ ಎರಡು ವಿಷಯಗಳು ಗೈರು ಹಾಜರೆಂಬುದನ್ನು ಮನಗಾಣುವ ಮೂಲಕ ಶುರು ಮಾಡಬೇಕು.ಮೊದಲನೆಯದು, ಸಮಾನತೆ– ಸಾಮಾಜಿಕ ಪರಿಧಿಯಲ್ಲಿ ನಮ್ಮ ಭಾರತವು ಶ್ರೇಣಿಕೃತ ಅಸಮಾನತೆಯ ತತ್ವವನ್ನು ಆಧರಿಸಿದೆ. ಅಂದರೆ ಕೆಲವರಿಗೆ ಉನ್ನತಿ ಮತ್ತು ಉಳಿದವರಿಗೆ ಅಧೋಗತಿ. ಆರ್ಥಿಕ ಕ್ಷೇತ್ರದಲ್ಲಿ ನಮ್ಮ ಸಮಾಜದಲ್ಲಿ ಕೆಲವರ ಬಳಿ ಅಪಾರ ಸಂಪತ್ತಿದ್ದರೆ ಉಳಿದವರು ಅಸಹನೀಯ ದಾರಿದ್ರ್ಯದಲ್ಲಿ ಬಾಳುತಿದ್ದಾರೆ. ಎರಡೆನೆಯದು, ಭ್ರಾತೃತ್ವ– ಸಾವಿರಾರು ಜಾತಿಗಳಾಗಿ ಒಡೆದು ಹೋಗಿರುವ ಸಮಾಜದಲ್ಲಿ ಭ್ರಾತೃತ್ವ ಹೇಗೆ ಸಾಧ್ಯ? ಈ ಜಾತಿ ಎಂಬುದು ಈ ಕಾರಣಕ್ಕಾಗಿಯೇ ದೇಶ ದ್ರೋಹಿಯಾಗಿದೆ. ಜಾತಿ ಅಳಿಯದೇ ಭ್ರಾತೃತ್ವ ಹುಟ್ಟುವುದಿಲ್ಲ. ಭ್ರಾತೃತ್ವ ಇಲ್ಲದೆ ಭಾರತ ಒಂದು ದೇಶವಾಗಲು ಸಾಧ್ಯವಿಲ್ಲ. ಎಂದು ಘೋಷಿಸುತ್ತಾರೆ. ಭಾರತೀಯರ ಈ ಆತ್ಮಘಾತುಕ ಇಬ್ಬಂದಿ ನಡವಳಿಕೆಗೆ ಮೂಲವನ್ನು ಅಂಬೇಡ್ಕರ್ ಹೀಗೆ ಗುರುತಿಸುತ್ತಾರೆ.

"ಇಂದು ಭಾರತೀಯರು ಎರಡೆರಡು ತತ್ವ ಸಿದ್ಧಾಂತಗಳಿಂದ ನಿರ್ದೇಶಿತರಾಗುತಿದ್ದಾರೆ. ಅವರ ರಾಜಕೀಯ ಆದರ್ಶವು ಸಂವಿಧಾನ ಮುನ್ನುಡಿಯಲ್ಲಿ ಘೋಷಿತವಾಗಿರುವ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಜೀವನಾದರ್ಶಗಳಿಂದ ಪ್ರೇರಿತಗೊಂಡರೆ, ಧರ್ಮದೊಳಗೆ ಎರಕಗೊಂಡಿರುವ ಅವರ ಸಾಮಾಜಿಕ ಆದರ್ಶವು ಮೇಲಿನ ರಾಜಕೀಯ ಆದರ್ಶವನ್ನು ನಿರಕರಿಸುತ್ತದೆ."

ಹೀಗೆ ಧಾರ್ಮಿಕ ತತ್ವ ಎಂಬಂತೆ ರೂಪುಗೊಂಡ ಜಾತಿವ್ಯವಸ್ಥೆ ಅತ್ಯಂತ ಜಡಗೊಂಡು ಮನುಷ್ಯರನ್ನು ಸಹ ಮನುಷ್ಯರನ್ನಾಗಿಯೂ ನೋಡದಂಥ ಆಚಾರ–ವಿಚಾರ ಮತ್ತು ವ್ಯವಸ್ಥೆಗಳನ್ನು ಬೆಳೆಸಿತು. ಇಂಥ ಸಮಾಜ ರಚನೆ ಇರುವ ದೇಶದಲ್ಲಿ ಪ್ರಜಾತಂತ್ರ ಯಶಸ್ವಿಯಾಗುವುದಿಲ್ಲ ಎಂಬುದು ಅವರ ಸ್ಪಷ್ಟ ಗ್ರಹಿಕೆಯಾಗಿತ್ತು. ಅದಕ್ಕೆ ಕಾರಣವನ್ನು ಅಂಬೇಡ್ಕರ್ ಹೀಗೆ ವಿವರಿಸುತ್ತಾರೆ.

"ಒಂದು ಪ್ರಜಾತಾಂತ್ರಿಕ ಸ್ವರೂಪದ ಸರ್ಕಾರವು ಒಂದು ಪ್ರಜಾತಾಂತ್ರಿಕ ಸ್ವರೂಪದ ಸಮಾಜವನ್ನು ಅಪೇಕ್ಷಿಸುತ್ತದೆ. ಸಾಮಾಜಿಕ ಪ್ರಜಾತಂತ್ರವಿಲ್ಲದಿದ್ದಲ್ಲಿ ಔಪಚಾರಿಕ ನೆಲಗಟ್ಟಿನ ಪ್ರಜಾತಂತ್ರಕ್ಕೆ ಯಾವ ಬೆಲೆಯು ಇಲ್ಲ. ಮತ್ತದು ಅಸಂಗತವೂ ಆಗಿರುತ್ತದೆ. ಒಂದು ಪ್ರಜಾತಾಂತ್ರಿಕ ಸಮಾಜದೊಳಗೆ ಐಕ್ಯತೆ, ಒಂದು ಉದ್ದೇಶಕ್ಕಾಗಿ ಒಂದಾದ ಸಮುದಾಯ, ಸಾರ್ವಜನಿಕ ಗುರಿಗಳ ಬಗ್ಗೆ ನಿಬದ್ಧತೆ ಮತ್ತು ಪರಸ್ಪರ ಸೌಹಾರ್ದತೆಗಳ ಅವಶ್ಯಕತೆ ಇಲ್ಲದೆಯೂ ಇರಬಹುದು. ಆದರೆ ಅದರಲ್ಲಿ ಅತ್ಯಗತ್ಯವಾಗಿ ಎರಡು ಅಂಶಗಳು ಇರಲೇಬೇಕು. ಮೊದಲನೆಯದು, ಸಹವಾಸಿಗಳ ಕುರಿತು ಗೌರವ ಮತ್ತು ಸಮಾನತೆಯ ಭಾವ ಮತ್ತು ಧೋರಣೆ, ಎರಡನೆಯದು, ಜಡ ಸಾಮಾಜಿಕ ಅಡ್ಡಗೋಡೆಗಳಿಂದ ಮುಕ್ತವಾದ ಸಾಮಾಜಿಕ ಸಂರಚನೆ ಉಳ್ಳವರು ಮತ್ತು ಇಲ್ಲದವರೆಂಬ ವ್ಯತ್ಯಾಸಗಳನ್ನು ನಿರ್ಮಿಸುವುದರಲ್ಲಿ ಪರ್ಯಾವಸಾನಗೊಳ್ಳುವ ಪ್ರತ್ಯೇಕತೆ ಮತ್ತು ಹೊರದಬ್ಬುವಿಕೆಗಳಿರುವೆಡೆ ಪ್ರಜಾತಂತ್ರ ಒಗ್ಗುವುದೂ ಇಲ್ಲ, ಒಟ್ಟಿರುವುದೂ ಇಲ್ಲ."

ಆದ್ದರಿಂದಲೇ ಜಾತಿ ಜಾತಿಗಳಾಗಿ ಒಡೆದಿರುವ ಈ ಸಮಾಜದಲ್ಲಿ ತನ್ನ ಸಹವಾಸಿಯನ್ನು ಮನುಷ್ಯನೆಂದೂ ಪರಿಭಾವಿಸದ ಸಮಾಜದ ರಾಷ್ಟ್ರೀಯತೆ ಮತ್ತು ದೇಶ ಪ್ರೇಮ ಎಂಬುದು ಹುಸಿಯಾಗಿರುತ್ತದೆ.ಎಂಬುದನ್ನೂ ಸಹ ಅಂಬೇಡ್ಕರ್ ಹೀಗೆ ಕಟ್ಟಿ ಕೊಡುತ್ತಾರೆ.

"ಭಾರತವು ಒಂದು ವಿಚಿತ್ರ ದೇಶ. ಅದರ ರಾಷ್ಟ್ರೀಯವಾದಿಗಳು ಮತ್ತು ದೇಶಪ್ರೇಮಿ ಮಂದಿಯೂ ವಿಚಿತ್ರ ಜನರೇ, ಭಾರತ ರಾಷ್ಟ್ರೀಯವಾದಿ ದೇಶಪ್ರೇಮಿಯೊಬ್ಬ ತನ್ನ ಸಹವಾಸಿಗಳನ್ನು ಪ್ರಾಣಿಗಿಂತ ಹೀನವಾಗಿ ನಡೆಸಿಕೊಳ್ಳುವುದನ್ನು ಬಿಡುಗಣ್ಣಿನಿಂದ ನೋಡುತ್ತ ನಿಲ್ಲ ಬಲ್ಲನೇ ಹೊರತು ಆತನೊಳಗಿನ ಮನುಷ್ಯತ್ವ ಅದರ ವಿರುದ್ಧ ಸಿಡಿದೇಳುವುದಿಲ್ಲ. ಪುರುಷರು ಮತ್ತು ಮಹಿಳೆಯರು ತಮ್ಮದಲ್ಲದ ಕಾರಣಕ್ಕಾಗಿ ಹಕ್ಕುಗಳಿಂದ ವಂಚಿತರಾಗುತಿದ್ದಾರೆಂದು ಆತನಿಗೆ ಗೊತ್ತು. ಆದರೆ ಅದು ಸಹಾಯ ಹಸ್ತ ಚಾಚುವಂತೆ ಅವನ ನಾಗರಿಕ ಪ್ರ**ಜ್ಞೆ**ಯನ್ನು ಚುಚ್ಚುವುದಿಲ್ಲ. ಒಂದು ದೊಡ್ಡ ಜನ ಸಮುದಾಯಕ್ಕೆ ಸಾರ್ವಜನಿಕ ಉದ್ಯೋಗಾವಕಾಶ ನಿಷಿದ್ಧವಾಗಿದೆ ಎಂಬುದನ್ನು ಅವನು ಕಾಣಬಲ್ಲ. ಆದರೆ ಅದು ಅವನಲ್ಲಿ ನ್ಯಾಯ ಪ್ರ**ಜ್ಞೆ**ಯನ್ನು ಜಾಗೃತಗೊಳಿಸುವುದಿಲ್ಲ. ಮನುಷ್ಯರಿಗೆ ಮತ್ತು ಸಮಾಜಕ್ಕೆ ಹಾನಿಯುಂಟು ಮಾಡುವ ನೂರಾರು ದುಷ್ಟ ಆಚರಣೆಗಳ ಬಗ್ಗೆ ಅವನಿಗೆ ಅರಿವಿದೆ. ಆದರೆ ಅದು ಅವನಲ್ಲಿ ಜಿಗುಪ್ಸೆ ಮೂಡಿಸುವುದಿಲ್ಲ. ಈ ದೇಶಪ್ರೇಮಿ ತನ್ನ ಧ್ವನಿ ಎತ್ತುವುದು ಒಂದೇ ಒಂದಕ್ಕೆ ತನಗೆ ಮತ್ತು ತನ್ನ ವರ್ಗದ ಅಧಿಕಾರಕ್ಕೆ. ನಾನು ಆ ಬಗೆಯ ದೇಶಪ್ರೇಮಿಗಳ ಗುಂಪಿಗೆ ಸೇರಿಲ್ಲ ವೆಂಬುದರ ಬಗ್ಗೆ ನನಗೆ ಹೆಮ್ಮೆ ಇದೆ. ನಾನು ಪ್ರಜಾಪ್ರಭುತ್ವದ ನೆಲೆಯಲ್ಲಿ ನಿಲುವನ್ನು ರೂಪಿಸಿಕೊಳ್ಳುವ ಮತ್ತು ಎಲ್ಲಾ ರೂಪದ ಏಕಸ್ವಾಮ್ಯವನ್ನು ನಾಶಗೊಳಿಸಲು ಬಯ್ಸುವ ವರ್ಗಕ್ಕೆ ಸೇರಿದವನು. ನಮ್ಮ ಧ್ಯೇಯವು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಎಲ್ಲಾ ಕ್ಷೇತ್ರಗಳಲ್ಲೂ ಒಬ್ಬ ಮನುಷ್ಯ ಒಂದು ಮೌಲ್ಯ ಎಂಬ ಆದರ್ಶವನ್ನು ಸಾಕಾರ ಗೊಳಿಸುವುದೇ ಆಗಿದೆ."

ಹೀಗೆ ಅಂಬೇಡ್ಕರ್ ಹೇಳುವಂತೆ " ಎಲ್ಲಿಯ ತನಕ ಜಾತಿ ವ್ಯವಸ್ಥೆಯ ಮೂಲಕ ಸಾಂಸ್ಥೀಕರಣಗೊಂಡಿರುವ ಸಾಮಾಜಿಕ ಅಸಮಾನತೆ ವಿನಾಶವಾಗುವುದಿಲ್ಲವೋ, ಆರ್ಥಿಕ ಸಂಪತ್ತಿನಲ್ಲಿ ಎಲ್ಲರೂ ಸಭಿನ ಪಾಲುದಾರರಾಗುವ ಮೂಲಕ ಆರ್ಥಿಕ ಅಸಮಾನತೆ ಇಲ್ಲವಾಗುವುದಿಲ್ಲವೋ, ಕೇವಲ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತ ಗೊಂಡಿರುವ ಒಬ್ಬ ವ್ಯಕ್ತಿ ಒಂದು ವೋಟು ಎಂಬ ಮೌಲ್ಯ ವಿಸ್ತರಣೆಗೊಂಡು 'ಒಬ್ಬವ್ಯಕ್ತಿ, ಒಂದು ಮೌಲ್ಯ' ವಾಗುವುದಿಲ್ಲವೋ ಅಲ್ಲಿಯ ತನಕ ನಮ್ಮ ದೇಶ ನಿಜವಾದ ಅರ್ಥದಲ್ಲಿ ಪ್ರಜಾತಂತ್ರ ದೇಶವಾಗುವುದಿಲ್ಲ"

ಹೀಗಾಗಿ ಭೌದ್ಧ ಧರ್ಮಕ್ಕೆ ಮತಾಂತರ ವಾಗುವ ಮೂಲಕ ಜಾತಿವ್ಯವಸ್ಥೆಗೆ ಕೊಡಲಿ ಪೆಟ್ಟು ಕೊಟ್ಟು ಸಾಮಾಜಿಕ ಸಮಾನತೆ

ಸಾಧಿಸುವುದು ಮತ್ತು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ರಾಜಿಯಾಗದೆ ಸಾಂವಿಧಾನಿಕವಾಗಿ ಸಮಾಜವಾದವನ್ನು ಕಡ್ಡಾಯ ಮಾಡುವ 'ಪ್ರಜಾಪ್ರಭುತ್ವವಾದದ' ಮೂಲಕ ಆರ್ಥಿಕ ಸಮಾನತೆಯನ್ನು ಜಾರಿಗೆ ತರುವುದು ಇದು ಅಂಬೇಡ್ಕರ್‌ರವರ ಮಾರ್ಗವಾಗಿತ್ತು.

ಹೀಗೆ ಈ ದೇಶದಲ್ಲಿ "ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ" ಗಳು ಸಾಕಾರಗೊಳ್ಳಲು ಪ್ರಬುದ್ಧ ಸಮಾಜದ ದಾರಿಯನ್ನು ಅಂಬೇಡ್ಕರ್ ಜನತೆಯ ಮುಂದಿಟ್ಟಿದ್ದಾರೆ. ಹಾಗೆಯೇ ಜಾತಿವಿನಾಶದ ಕಡೆ ತಮ್ಮ **ಜ್ಞಾ**ನವನ್ನು ಅರಿಸಿ ಸಮ ಸಮಾಜವನ್ನು ನಿರ್ಮಾಣ ಮಾಡಲು ತಮ್ಮ ತನು, ಮನ, ಧನ ವನ್ನು ಭಾರತಕಾಗಿ ಇಡೀ ಭಾರತೀಯರಿಗಾಗಿ ಧಾರೆ ಎರೆದಿದ್ದಾರೆ.

**ಗ್ರಂಥ ಋಣ**


1. 'ಜಾತಿ ವ್ಯವಸ್ಥೆ' – ಮೂಲ: ಡಾ॥ ಬಿ. ಆರ್. ಅಂಬೇಡ್ಕರ್, ಕನ್ನಡಕ್ಕೆ: ರಾಹೂ
2. 'ಜಾತಿ ಸಂವಾದ' – ವಿವಿಧ ಲೇಖಕರು ಪ್ರಕಾಶಕರು: ಪ್ರಜಾವಾಣಿ ಪ್ರಕಾಶನ (2014) ಬೆಂ–01
3. 'ಜಾತಿಯ ನಿರ್ಮೂಲನೆ'–ಮೂಲ–ಡಾ.ಬಿ. ಆರ್. ಅಂಬೇಡ್ಕರ್ ಅನುವಾದ: ಶ್ರೀಮತಿ ಕಮಲ ಹಂಪನಾ (1985)
4. 'ಜಾತಿ ವ್ಯವಸ್ಥೆಯ ಉಗಮ, ವಿಕಾಸ, ವಿನಾಶ'–ಮೂಲ. ಡಾ. ಬಿ. ಆರ್. ಅಂಬೇಡ್ಕರ್ ಕನ್ನಡಕ್ಕೆ –ರಾ. ಹು (2010)
5. 'ಜಾತಿ ಪದ್ಧತಿ' –ಡಾ. ರಾಮ ಮನೋಹರ್ ಲೋಹಿಯಾ ಕನ್ನಡಕ್ಕೆ: ಹಸನ್ ನಯೀಂ ಸುರಕೋಡ.(2014)
6. 'ಅಂಬೇಡ್ಕರ್ ಚಿಂತನೆಗಳ ಪ್ರವೇಶಿಕೆ'–ಡಾ. ಬಿ. ಆರ್. ಅಂಬೇಡ್ಕರ್ ರವರ 125ನೇ ಜಯಂತಿಯ ವರ್ಷಾ ಚರಣೆಯ ಅಂತರ ರಾಷ್ಟ್ರೀಯ ಸಮ್ಮೇಳನಾ ಆಯೋಜನಾ ಸಮತಿ (2017)